# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 550

2 ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)

3 ಉತ್ತರಿಸಬೇಕಾದ ದಿನಾಂಕ : 20.08.2026

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ವಿಷಯ | ಉತ್ತರ |
|---|---|---|
| ಅ | ಡಿಟೆಕ್ಟಿವ್ ಇನ್ಸ್ ಪೆಕ್ಟರ್‌ಗಳನ್ನು ಸಿವಿಲ್ ಹುದ್ದೆಗೆ ತಂದಾಗ ಸಿವಿಲ್ ವಿಭಾಗದ ಹಿರಿಯ ಅಧಿಕಾರಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; 1994ನೇ ಬ್ಯಾಚ್‌ನ ಸಿವಿಲ್ ಅಧಿಕಾರಿಗಳ ಮೇಲೆ 2002ರ ಬ್ಯಾಚ್ ನ ಡಿಟೆಕ್ಟಿವ್ ಅಧಿಕಾರಿಗಳನ್ನು ಎಸ್.ಪಿ.ಯಾಗಿ ಮಾಡಿರುವುದರಿಂದ ಸಿವಿಲ್ ಅಧಿಕಾರಿಗಳ ಹಿರಿತನ ಕಡೆಗಣನೆ ಮಾಡಿರುವುದು ಯಾವ ಕಾರಣಕ್ಕೆ; (ವಿವರ ನೀಡುವುದು) | ಡಿಟೆಕ್ಟಿವ್ ಇನ್ಸ್ ಪೆಕ್ಟರ್‌ಗಳನ್ನು ಸಿವಿಲ್ ಹುದ್ದೆಯ ಎದುರಿಗೆ ಇಲ್ಲಿಯವರೆಗೂ ನಿಯುಕ್ತಿಗೊಳಿಸಿರುವುದಿಲ್ಲ.<br><br>ಆದರೆ, ಡಿಟೆಕ್ಟಿವ್ ಇನ್‌ಸ್‌ಪೆಕ್ಟರ್ ದರ್ಜೆಯಲ್ಲಿ 12 ರಿಕ್ತಸ್ಥಾನಗಳಿದ್ದು, ಸದರಿ ಹುದ್ದೆಗಳಿಗೆ ಮುಂಬಡ್ತಿಗೆ ಪರಿಗಣಿಸಲು ಅರ್ಹ ಡಿಟೆಕ್ಟಿವ್ (ಪಿಎಸ್‌ಐ) ರವರು ಲಭ್ಯವಿಲ್ಲದಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 10 ಪಿಇಜಿ 2025, ದಿನಾಂಕ: 16.05.2025 ರನ್ವಯ ಸಿವಿಲ್ ಇನ್ಸ್ ಪೆಕ್ಟರ್‌ಗಳಿಗೆ ಡಿವೈಎಸ್ ಪಿ(ಡಿಟೆಕ್ಟಿವ್) ಹುದ್ದೆಗಳಿಗೆ ಎದುರಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 359 ಪಿಇಜಿ 2025, ದಿನಾಂಕ: 13.10.2025 ರಲ್ಲಿ ಕೆ.ಸಿ.ಎಸ್ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.<br><br>ಈ ಪ್ರಕಾರ ಡಿಟೆಕ್ಟಿವ್ ಇನ್ಸ್ ಪೆಕ್ಟರ್‌ಗಳ ಹುದ್ದೆಯ ಎದುರಿಗೆ ಸಿವಿಲ್ ಇನ್ಸ್ ಪೆಕ್ಟರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ಹೊರತು ಸಿವಿಲ್ ಹುದ್ದೆಯ ಎದುರಾಗಿ ಡಿಟೆಕ್ಟಿವ್ ಇನ್ಸ್ ಪೆಕ್ಟರ್‌ಗಳು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 185 ಪೊಸಿಪ 2018 ದಿನಾಂಕ: 07.09.2020 ರಲ್ಲಿ ಪ್ರಕಟಿಸಲಾದ ಸಿ.ಐ.ಡಿ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, 2001 ರಲ್ಲಿ ಡಿಟೆಕ್ಟಿವ್ ಪಿಎಸ್‌ಐ ವೃಂದದಲ್ಲಿ ನೇಮಕಾತಿಗೊಂಡ ಅಧಿಕಾರಿಗಳು ಅವರುಗಳ ಅರ್ಹತೆ ಮತ್ತು ಉನ್ನತ ವೃಂದದಲ್ಲಿ ಲಭ್ಯವಾದ ರಿಕ್ತಸ್ಥಾನಗಳ ಮೇರೆಗೆ ಪ್ರಸ್ತುತ 08 ಡಿಟೆಕ್ಟಿವ್ ಅಧಿಕಾರಿಗಳು ಎಸ್‌ಪಿ (ಡಿಟೆಕ್ಟಿವ್) ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಡಿಟೆಕ್ಟಿವ್ ವೃಂದದಲ್ಲಿನ ಅಧಿಕಾರಿ ಲಭ್ಯತೆಯು ಸಿವಿಲ್ ವೃಂದದ ಅಧಿಕಾರಿಗಳ ಬಲಕ್ಕೆ ತುಲನೆ ಮಾಡಿದರೆ ತೀರ ಕಡಿಮೆ ಇದ್ದು, ಡಿಟೆಕ್ಟಿವ್ ಅಧಿಕಾರಿಗಳು ನಿಗದಿತ ಸೇವಾ ಅವಧಿಯನ್ನು ಪೂರೈಸಿದ ತಕ್ಷಣ ರಿಕ್ತಸ್ಥಾನಗಳ ಎದುರಿಗೆ ಮುಂಬಡ್ತಿ ನೀಡಲಾಗುತ್ತಿರುತ್ತದೆ.<br><br>ಆದರೆ, ಸಿವಿಲ್ ವೃಂದದಲ್ಲಿ ಪಿಎಸ್‌ಐ ದರ್ಜೆಯಿಂದ ಪಿಐ ದರ್ಜೆಗೆ ಮುಂಬಡ್ತಿ ಹೊಂದಲು ನಿಗದಿತ ಸೇವಾ |

<table>
<tr><td></td><td></td><td>ಅವಧಿಯನ್ನು ಪೂರೈಸಿರುವ ಅಧಿಕಾರಿಗಳು ಹೆಚ್ಚಿಗೆ ಇದ್ದು, ರಿಕ್ತಸ್ಥಾನಗಳ ಲಭ್ಯತೆಯು ತೀರ ಕಡಿಮೆ ಇರುವುದರಿಂದ ಮುಂಬಡ್ತಿಯಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಪ್ರಸ್ತುತ 1994-95 ಅವಧಿಯಲ್ಲಿ ಪಿಎಸ್‌ಐ (ಸಿವಿಲ್) ವೃಂದದಲ್ಲಿ ನೇಮಕಗೊಂಡ ಅಧಿಕಾರಿಗಳು ಎಸ್‌ಪಿ (ನಾನ್ ಐಪಿಎಸ್) ವೃಂದದಲ್ಲಿ ಹಾಲಿ ಕೆ.ಸಿ.ಎಸ್. ನಿಯಮ 32 & 42 ರಡಿ ಮುಂಬಡ್ತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.</td></tr>
<tr><td>ಆ</td><td>ಡಿಟೆಕ್ಟಿವ್ ಡಿಎಸ್‌ಪಿ/ಎಸ್‌ಪಿ ಅಡಿಯಲ್ಲಿ ಕೆಲಸ ಮಾಡಲು ಡಿಟೆಕ್ಟಿವ್ ಪಿ.ಎಸ್.ಐ/ಪಿ.ಐ ಇಲ್ಲದೆ ಇದ್ದಾಗಲು ಅವರುಗಳಿಗೆ 5 ವರ್ಷಗಳಿಗೊಮ್ಮೆ ಬಡ್ತಿ ನೀಡುತ್ತಿದ್ದು 5 ವರ್ಷಗಳ ಅಂತರದಲ್ಲಿ ಡಿಟೆಕ್ಟಿವ್ ಇನ್ಸ್ ಪೆಕ್ಟರ್ ಬಡ್ತಿ ನೀಡಿದ ಮೇಲೆ ಸಿವಿಲ್ ಇನ್ಸ್ ಪೆಕ್ಟರ್ ಗಳಿಗೆ 5 ವರ್ಷಗಳ ಅಂತರದಲ್ಲಿ ಬಡ್ತಿ ನೀಡದೆ ಇರಲು ಕಾರಣಗಳೇನು (ವಿವರ ನೀಡುವುದು)</td><td>ಹಾಲಿ ಡಿಟೆಕ್ಟಿವ್ ವೃಂದದಲ್ಲಿನ ಅಧಿಕಾರಿಗಳ ಬಲಾ-ಬಲವು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಹುದ್ದೆ</th><th>ಮಂಜೂರಾತಿ ಬಲ</th><th>ಹಾಲಿ ಬಲ</th><th>ರಿಕ್ತ ಸ್ಥಾನ</th><th>ಷರಾ</th></tr>
<tr><td>ಡಿವೈಎಸ್‌ಪಿ</td><td>20</td><td>2</td><td>18</td><td rowspan="2">ಸಿವಿಲ್ ವೃಂದದ ಅಧಿಕಾರಿಗಳು ಸದರಿ ಹುದ್ದೆಯ ಎದುರಿಗೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ</td></tr>
<tr><td>ಪಿಐ</td><td>40</td><td>28</td><td>12</td></tr>
<tr><td>ಪಿಎಸ್‌ಐ</td><td>70</td><td>32</td><td>38</td><td>ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಪೈಕಿ ಒಬ್ಬ ಅಧಿಕಾರಿ ಮಾತ್ರ ನೇರ ನೇಮಕಾತಿ ಮೂಲಕ ಭರ್ತಿಯಾಗಿದ್ದು, ಬಾಕಿ 31 ಜನ (ಸಿವಿಲ್ ಮತ್ತು ಸಶಸ್ತ್ರ ವೃಂದದ ಎ.ಎಸ್.ಐ ದರ್ಜೆಯ) ಅಧಿಕಾರಿಗಳು ಕೆ.ಎಫ್.ಸಿ 131 ರನ್ವಯ ಕರ್ತವ್ಯ</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr><td></td><td></td><td></td><td></td><td>ನಿರ್ವಹಿಸುತ್ತಿ ರುತ್ತಾರೆ</td></tr>
</table>
ಆದರೆ ಸಿವಿಲ್ ವೃಂದದಲ್ಲಿನ ಅಧಿಕಾರಿಗಳ ಬಲಾ-ಬಲವು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಹುದ್ದೆ</th><th>ಮಂಜೂರಾತಿ ಬಲ</th><th>ಹಾಲಿ ಬಲ</th><th>ರಿಕ್ತಸ್ಥಾನ</th><th>ಷರಾ</th></tr>
<tr><td>ಡಿವೈಎಸ್‌ಪಿ</td><td>466</td><td>411</td><td>55</td><td>DR: 19<br>PR:36</td></tr>
<tr><td>ಪಿಐ</td><td>1247</td><td>1236</td><td>11</td><td>-</td></tr>
<tr><td>ಪಿಎಸ್‌ಐ</td><td>3866</td><td>3609</td><td>257</td><td>DR: 200<br>PR:57</td></tr>
</table>
ಡಿಟೆಕ್ಟಿವ್ ವೃಂದದಲ್ಲಿನ ಅಧಿಕಾರಿ ಲಭ್ಯತೆಯು ಸಿವಿಲ್ ವೃಂದದ ಅಧಿಕಾರಿಗಳ ಬಲಕ್ಕೆ ತುಲನೆ ಮಾಡಿದರೆ ತೀರ ಕಡಿಮೆ ಇದ್ದು, ಡಿಟೆಕ್ಟಿವ್ ಅಧಿಕಾರಿಗಳು ನಿಗದಿತ ಸೇವಾ ಅವಧಿಯನ್ನು ಪೂರೈಸಿದ ತಕ್ಷಣ ರಿಕ್ತಸ್ಥಾನಗಳ ಎದುರಿಗೆ ಮುಂಬಡ್ತಿ ನೀಡಲಾಗುತ್ತಿರುತ್ತದೆ.
ಆದರೆ, ಸಿವಿಲ್ ವೃಂದದಲ್ಲಿ ಪಿಎಸ್‌ಐ ದರ್ಜೆಯಿಂದ ಪಿಐ ದರ್ಜೆಗೆ ಮುಂಬಡ್ತಿ ಹೊಂದಲು ನಿಗದಿತ ಸೇವಾ ಅವಧಿಯನ್ನು ಪೂರೈಸಿರುವ ಅಧಿಕಾರಿಗಳು ಹೆಚ್ಚಿಗೆ ಇದ್ದು, ರಿಕ್ತಸ್ಥಾನಗಳ ಲಭ್ಯತೆಯು ತೀರ ಕಡಿಮೆ ಇರುವುದರಿಂದ ಮುಂಬಡ್ತಿಯಲ್ಲಿ ವಿಳಂಬವಾಗುತ್ತಿದೆ.
</td>
</tr>
<tr>
<td>ಇ</td>
<td>ನಾನ್ ಐಪಿಎಸ್ ಹುದ್ದೆಯಲ್ಲಿ ಐ.ಪಿ.ಎಸ್ ಅಧಿಕಾರಿಗಳು ಇರುವುದಕ್ಕೆ ಕಾರಣವೇನು? ಕನ್ನಡಿಗರ ನಾನ್ ಐ.ಪಿ.ಎಸ್. ಹುದ್ದೆಯನ್ನು ಐ.ಪಿ.ಎಸ್. ಹುದ್ದೆಗೆ ಬದಲಾಯಿಸಿ ಕನ್ನಡಿಗರಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: I-11052/08/2015-AIS-II(A), ದಿನಾಂಕ: 29.09.2022 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಐಪಿಎಸ್ ಅಧಿಕಾರಿಗಳಿಗೆ 224 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಹಾಲಿ 122 ಹುದ್ದೆಗಳನ್ನು ಮಾತ್ರ (ಎಸ್‌ಪಿ ಯಿಂದ ಡಿಜಿಪಿ ರವರೆಗೆ) ನಿರ್ದಿಷ್ಟ ಹುದ್ದೆಗಳಾಗಿ ಗುರುತಿಸಿದ್ದು, 48 ಹುದ್ದೆಗಳನ್ನು ಕೇಂದ್ರ ನಿಯೋಜನೆಗೆ ಮತ್ತು 4 ಹುದ್ದೆಗಳನ್ನು ತರಬೇತಿಗಾಗಿ ಗುರುತಿಸಲಾಗಿದ್ದು, ಬಾಕಿ ಉಳಿದ 50 ಹುದ್ದೆಗಳಿಗೆ ನಿರ್ದಿಷ್ಟ ಹುದ್ದೆಗಳ ಹಂಚಿಕೆ ಇರುವುದಿಲ್ಲ. ರಾಜ್ಯ ಪೊಲೀಸ್ ಇಲಾಖೆಯ ವೃಂದ ನಿರ್ವಹಣೆಗಾಗಿ ಐ.ಪಿ.ಎಸ್ ಅಧಿಕಾರಿಗಳಿಗೆ ಕೇಡರ್ ಹುದ್ದೆಗಳಿಗೆ ಸಮನಾಗಿ ರಾಜ್ಯದಲ್ಲಿ ಲಭ್ಯವಿರುವ ವಿವಿಧ ದರ್ಜೆಯ ಹುದ್ದೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಎಕ್ಸ್-ಕೇಡರ್ ಹುದ್ದೆಗಳನ್ನಾಗಿಸಿ ಐಪಿಎಸ್ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ, ಐ.ಪಿ.ಎಸ್ ಕೇಡರ್ ನಿಯಮಗಳು 1954ರ ನಿಯಮ 8ರನ್ವಯ</td>
</tr>
</table>

| | | |
|---|---|---|
| | | ಸರ್ಕಾರವೇ ಸಕ್ಷಮ ಪ್ರಾಧಿಕಾರಿಯಾಗಿರುತ್ತದೆ. ಅಂತೆಯೇ ರಾಜ್ಯದಲ್ಲಿ ಎಸ್‌ಪಿ (ನಾನ್ ಐಪಿಎಸ್) (ಸಿವಿಲ್)/ ಇತರೆ ಸಮನಾಂತರ ಹುದ್ದೆಗಳ ಎದುರು ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಸರ್ಕಾರದಿಂದ ಎಸ್‌ಪಿ ದರ್ಜೆಯ ಐಪಿಎಸ್ ಅಧಿಕಾರಿಗಳನ್ನು ನೇಮಿಸಲಾಗುತ್ತಿರುತ್ತದೆ.<br><br>ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: I-11052/08/2015-AIS-II(A), ದಿನಾಂಕ: 29.09.2022 ರಲ್ಲಿ ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಮಾಡಲಾಗಿರುವ 224 ಐಪಿಎಸ್ ಅಧಿಕಾರಿಗಳ ಪೈಕಿ ರಾಜ್ಯ ಪೊಲೀಸ್ ಸೇವಾ ವೃಂದದಿಂದ ಐಪಿಎಸ್ ವೃಂದಕ್ಕೆ ಮುಂಬಡ್ತಿ ಹೊಂದಲು 68 ಅಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ರಾಜ್ಯ ಪೊಲೀಸ್ ಇಲಾಖೆಯ ಐ.ಪಿ.ಎಸ್ ವೃಂದ ನಿರ್ವಹಣೆಯು ನಿರ್ದಿಷ್ಟ ಅಧಿಕಾರಿಗಳಿಗೆ ಸೀಮಿತವಾಗಿರದೇ ಸರ್ಕಾರದ ನೀತಿ-ನಿಯಮಗಳಿಗೆ ಸಂಬಂಧಪಟ್ಟಿರುತ್ತದೆ. |
| ಈ) | ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಖಾಲಿ ಇರುವ 25 ನಾನ್ ಐ.ಪಿ.ಎಸ್. ಎಸ್.ಪಿ. ಹುದ್ದೆಗೆ ಯಾವ ಕಾಲಮಿತಿಯಲ್ಲಿ ಬಡ್ತಿ ನೀಡಲಾಗುವುದು; (ವಿವರ ನೀಡುವುದು) | ನೇರ ನೇಮಕಾತಿಯಡಿ ಆಯ್ಕೆಗೊಂಡ ಶ್ರೀಮತಿ ಅನುಷಾ ಜಿ. ಡಿವೈಎಸ್‌ಪಿ (ಸಿವಿಲ್) ಮತ್ತು ಇತರರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 5238-5263/2023ನ್ನು ಸಲ್ಲಿಸಿ ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತೆಯ ಬಗ್ಗೆ ಮತ್ತು ವೃಂದ ನಿರ್ವಹಣೆಯ ಬಗ್ಗೆ ಪ್ರಶ್ನಿಸಿದ್ದ ಮೇರೆಗೆ ಮಾನ್ಯ ನ್ಯಾಯ ಮಂಡಳಿಯು ದಿನಾಂಕ: 06.02.2025 ರಂದು ಅಂತಿಮ ಆದೇಶವನ್ನು ಹೊರಡಿಸಿ ಈ ಹಿಂದೆ ಚಾಲ್ತಿಯಲ್ಲಿದ್ದ ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ರದ್ದುಪಡಿಸಿ, ಸದರಿ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವಂತೆ ಹಾಗೂ ಅಲ್ಲಿಯವರೆಗೂ ಡಿವೈಎಸ್‌ಪಿ (ಸಿವಿಲ್) ವೃಂದದಿಂದ ಎಸ್.ಪಿ.(ಸಿವಿಲ್)( ನಾನ್ ಐಪಿಎಸ್) ವೃಂದಕ್ಕೆ ಮುಂಬಡ್ತಿ ನೀಡದಂತೆ ಸೂಚಿಸಲಾದ ಮೇರೆಗೆ ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆಯು ಅಂತಿಮಗೊಂಡ ನಂತರದಲ್ಲಿ ಎಸ್‌ಪಿ(ಸಿವಿಲ್) (ನಾನ್ ಐಪಿಎಸ್) ದರ್ಜೆಯಲ್ಲಿ ಲಭ್ಯವಿರುವ ರಿಕ್ತಸ್ಥಾನಗಳಿಗೆ ಮುಂಬಡ್ತಿ ನೀಡಲು ಪರಿಶೀಲಿಸಲಾಗುವುದು. |
| ಉ | ಐ.ಪಿ.ಎಸ್. ಹುದ್ದೆಗಳು ಖಾಲಿ ಇಲ್ಲದೆ ಇದ್ದಾಗಲೂ ಐ.ಪಿ.ಎಸ್. ಅಧಿಕಾರಿಗಳನ್ನು ರಾಜ್ಯದಲ್ಲಿ ನೇಮಕಾತಿ | ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: I-11052/08/2015-AIS-II(A), ದಿನಾಂಕ: 29.09.2022 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಐಪಿಎಸ್ ಅಧಿಕಾರಿಗಳಿಗೆ 224 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಹಾಲಿ 197 ಅಧಿಕಾರಿಗಳು ಮಾತ್ರ ರಾಜ್ಯಕ್ಕೆ ಹಂಚಿಕೆ |

| | | |
|---|---|---|
| | ಮಾಡಿಕೊಳ್ಳುವುದರಿಂದ ರಾಜ್ಯದಲ್ಲಿ ಬಡ್ತಿಗಾಗಿ ಕಾಯುತ್ತಿರುವ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದ್ದು, ಸದರಿಯವರಿಗೆ ಬಡ್ತಿ ನೀಡಲು ಸರ್ಕಾರದ ಕ್ರಮವೇನು? (ವಿವರ ನೀಡುವುದು) | ಆಗಿದ್ದು, 27 ಅಧಿಕಾರಿಗಳನ್ನು ಹಂಚಿಕೆ ಮಾಡಲು ಬಾಕಿ ಇರುತ್ತದೆ. ರಾಜ್ಯ ಪೊಲೀಸ್ ಇಲಾಖೆಯ ಐ.ಪಿ.ಎಸ್ ವೃಂದ ನಿರ್ವಹಣೆಯು ಸರ್ಕಾರದ ನೀತಿ-ನಿಯಮಗಳಿಗೆ ಸಂಬಂಧಪಟ್ಟಿರುತ್ತದೆ. |

**ಸಂಖ್ಯೆ: ಒಇ 461 ಪಿಇಜಿ 2026**

(ಪ್ರಿಯಾಂಕ್ ಖರ್ಗೆ)
**ಗೃಹ ಸಚಿವರು**